# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮಂಡ್ಯ.

## ಸಿ.ಸಿ. ಸಂಖ್ಯೆಃ 1519/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಮಹೇಶ್ | ಪ್ರಮಾಣ ಮಾಡಿದ ದಿನಾಂಕ | 27-03-2026 |
| ತಂದೆಯ ಹೆಸರು | ರಾಮೇಗೌಡ | | |
| ವಯಸ್ಸು | 51 ವರ್ಷ | | |
| ವೃತ್ತಿ | ಮುಖ್ಯ ಪೇದೆ, ಸಂಚಾರಿ ಪೋಲಿಸ್ ಠಾಣೆ | ಚಾಸಾ | 14 |
| ವಾಸಸ್ಥಳ | ಮಂಡ್ಯ | ಫ್ರಾಸಾ | 4 |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ಮೇ 2022 ರಿಂದ ಇಲ್ಲಿಯವರೆಗೆ ಮಂಡ್ಯ ಸಂಚಾರಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ12-04-2023 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮಧ್ಯಾಹ್ನ 12.30 ಗಂಟೆ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರನ್ನು ನೀಡಿದ್ದು ಅದನ್ನು ಸ್ವೀಕರಿಸಿ ಠಾ.ಮೊ. ಸಂಖ್ಯೆ 22/2023 ರಲ್ಲಿ ಪ್ರಕರಣ ದಾಖಲಿಸಿ ಪ್ರ.ವ.ವ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಯು ದೂರಿನಲ್ಲಿರುವ ಸಹಿಯನ್ನು ನೋಡಿ ಗುರ್ತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಡಿ) ಎಂದು ಗುರ್ತಿಸಲಾಯಿತು. ಪ್ರ.ವ.ವ ಯನ್ನು ನೋಡುತ್ತಿದ್ದು ಅದನ್ನು ನಿಪಿ 6 ಎಂದು, ಗುರ್ತಿಸಲಾಯಿತು. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ-2 ರವರು ತೋರಿಸಿದ ಸ್ಥಳದಲ್ಲಿ 2.30 ರಿಂದ 3.15 ಗಂಟೆಯವರೆಗೆ ಚಾಸಾ-3 ಮತ್ತು 4 ರವರ ಸಮಕ್ಷಮ ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತೇನೆ.

ಅದೇ ದಿನ ಫೋಟೋ ತೆಗೆದಿರುತ್ತೇವೆಂದು ಸಾಕ್ಷಿ ಹೇಳಿದ ಕಾರಣ ಫೋಟೋವನ್ನು ನಿಪಿ–3 ಎಂದು ಗುರುತಿಸಲಾಯಿತು. ಅದೇ ದಿನ ಪಿರ್ಯಾದಿದಾರರು ಅಪಘಾತಕ್ಕೊಳಗಾದ ಕೆಎ–41–ಕೆ–443 ಬಜಾಜ್ ಪಲ್ಸಾರ್ ಬೈಕ್ ನ್ನು ಠಾಣೆಯ ಮುಂದೆ ತಂದು ಹಾಜರು ಪಡಿಸಿದ್ದು, ಚಾಸಾ–3, 5 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಮಹಜರ್ ನ್ನು ನೋಡಿ ಗುರುತಿಸಿದ್ದು ಮಹಜರ್ ನ್ನು ನಿಪಿ–8 ಎಂದು, ಸಾಕ್ಷಿಯ ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು. ನಿಪಿ–8 ರ ವೇಳೆಯಲ್ಲಿ ಫೋಟೋ ತೆಗೆದಿರುತ್ತೇವೆಂದು ಹೇಳಿದ ಕಾರಣ ಪೊಟೋವನ್ನು ನಿಪಿ–9 ಎಂದು ಗುರುತಿಸಲಾಯಿತು.

ಅದೇ ದಿನ ಗಾಯಾಳು ಕೃಷ್ಣರವರ ಮತ್ತು ಚಾಸಾ–2 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿಃ13–04–2023 ರಂದು ಅಪಘಾತ ಪಡಿಸಿದ ವಾಹನ ಸಂಖ್ಯೆ ಕೆಎ–41–ವೈ–5982 ರ ಕಾರನ್ನು ಚಾಸಾ–11 ರವರು ಹಾಜರು ಪಡಿಸಿದ ಮೇರೆಗೆ ಠಾಣೆಯ ಮುಂಭಾಗ ಚಾಸಾ–7 ಮತ್ತು 8 ರವರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಅಮಾನತ್ತು ನ್ನು ಸಾಎಕ್ಷಿ ನೋಡಿ ಗುರುತಿಸಿದ ಕಾರಣ ನಿಪಿ–10 ಎಂದು, ಸಾಕ್ಷಿಯ ಸಹಿಯನ್ನು ನಿಪಿ–10(ಎ) ಎಂದು, ನಿಪಿ–10 ರ ವೇಳೆಯಲ್ಲಿ ಫೋಟೋ ತೆಗೆದಿರುತ್ತೇವೆಂದು ಹೇಳಿದ ಕಾರಣ ಪೊಟೋವನ್ನು ನಿಪಿ–11 ಎಂದು ಗುರುತಿಸಲಾಯಿತು.

ಅದೇ ದಿನ 13–04–2023 ರಂದು ಚಾಸಾ–11 ಮತ್ತು 12 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ದಿಃ14–04–2023 ರಂದು 2 ನೇ ಆರೋಪಿಗೆ 41(ಎ) ಸಿಆರ್.ಸಿ ರೀತ್ಯಾ ತನಿಖೆ,ಗೆ ಸಹಕರಿಸುವಂತೆ ನೋಟಿಸ್ ಕೊಟ್ಟಿರುತ್ತೇನೆ. ನಂತರ ಕೆಎ–41–ಕೆ–0463 ರ ವಾಹನದ ಮಾಲಿಕರಿಗೆ ನೋಟಿಸ್ ಕೊಟ್ಟು ಮರುತ್ತರ ಪಡೆದುಕೊಂಡಿದ್ದೇನೆ. ಸಾಕ್ಷಿಯು ಸದರಿ ನೋಟಿಸ್ ಮತ್ತು ಮರುತ್ತರವನ್ನು ನೋಡಿ ಗುರುತಿಸಿದ್ದು ಕ್ರಮವಾಗಿ ನಿಪಿ–12 ಮತ್ತು 13 ಎಂದು ಗುರುತಿಸಿ ಮತ್ತು ಸಾಕ್ಷಿಯ ಸಹಿಗಳನ್ನು ನಿಪಿ–12 (ಎ) ಮತ್ತು ನಿಪಿ–13(ಎ) ಎಂದು ಗುರುತಿಸಲಾಯಿತು ನಂತರ ಆರೊಪಿಯನ್ನು ಗುರುತಿಸುವ ವಿಚಾರದಲ್ಲಿ ಚಾಸಾ–1 ಮತ್ತು 2 ರವ ರ ಹೇಳಿಕೆಗಳನ್ನು ದಾಖಲಿಸಿರುತ್ತೇನೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ–15 ರವರಿಗೆ ವಹಿಸಿಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ)

**ಪಾಟಿ ಸವಾಲುಃ ಮಾನ್ಯ ಎಪಿಪಿರವರಿಂದ**

ಆ ದಿನ ಅಮಾನತ್ತು ಪಡಿಸಿಕೊಂಡ ವಾಹನದ ಸಂಖ್ಯೆ ಕೆಎ–41–ವೈ–5982 ಅಲ್ಲ ಕೆಎ–41–ಜೆಡ್ –5982 ಎಂದರೆ ಸರಿ. ಕೈ ತಪ್ಪಿನಿಂದ ತಪ್ಪಾಯಿತು ಎಂದು ನುಡಿಯುತ್ತಾರೆ.

**ಪಾಟೀ ಸವಾಲು :– ಆರೋಪಿ ಪರ ವಕೀಲರಿಂದ**

ನನಗೆ ಯಾರು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ, ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ವಾಹನಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿರುದ್ದ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದೇ ಇದ್ದರೂ ಸುಳ್ಳು ಪ್ರಕರಣವನ್ನು ಸೃಷಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಫೋಟೋಗಳನ್ನು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿಕೊಂಡಿದ್ದೆನೆಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಮಂಡ್ಯ.